# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯೂಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

**KARNATAKA SCHOOL EXAMINATION AND ASSESSMENT BOARD**

KSQAAC, Malleshwaram, Bengaluru–560003.

## ಮೌಲ್ಯಾಂಕನ – ಮಾರ್ಚ್ 2024 – ಮಾದರಿ ಪ್ರಶ್ನೋತ್ತರ ಪತ್ರಿಕೆ

## Assessment - March 2024 Model Paper

**ತರಗತಿ : 9** **ವಿಷಯ : ತೃತೀಯ ಭಾಷೆ ಕನ್ನಡ** **ಅಂಕಗಳು : 80**
**ಸಮಯ : 3 ಗಂಟೆಗಳು**

**ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ**

ವಿದ್ಯಾರ್ಥಿಯ ಹೆಸರು : ____________________

ವಿದ್ಯಾರ್ಥಿಯ SATS ಸಂಖ್ಯೆ : [ ][ ][ ][ ][ ][ ][ ][ ][ ] ವಿದ್ಯಾರ್ಥಿಯ ಸಹಿ : ____________

**ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ**

ಶಾಲೆಯ ಡೈಸ್ ಕೋಡ್ : [ ][ ][ ][ ][ ][ ][ ][ ][ ][ ][ ]

ಶಾಲೆಯ ಹೆಸರು : ____________________

ಕ್ಲಸ್ಟರ್ : ____________ ಬ್ಲಾಕ್ : ____________ ಜಿಲ್ಲೆ : ____________

ಶಾಲೆಯ ವಿಧ : ಸರ್ಕಾರಿ [ ] ಅನುದಾನಿತ [ ] ಅನುದಾನ ರಹಿತ [ ]

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ____________

**ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ**

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 14 | | 27 | |
| 2 | | 15 | | 28 | |
| 3 | | 16 | | 29 | |
| 4 | | 17 | | 30 | |
| 5 | | 18 | | 31 | |
| 6 | | 19 | | 32 | |
| 7 | | 20 | | 33 | |
| 8 | | 21 | | 34 | |
| 9 | | 22 | | 35 | |
| 10 | | 23 | | 36 | |
| 11 | | 24 | | 37 | |
| 12 | | 25 | | 38 | |
| 13 | | 26 | | | |
| ಒಟ್ಟು ಅಂಕಗಳು | | ಒಟ್ಟು ಅಂಕಗಳು | | ಒಟ್ಟು ಅಂಕಗಳು | |
| | | | | ಒಟ್ಟು ಗಳಿಸಿದ ಅಂಕ | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ____________________

ಮೌಲ್ಯಮಾಪಕರ ಸಹಿ : ____________

# ಕನ್ನಡ ತೃತೀಯ ಭಾಷೆ

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ** **8 x 1 = 8**

**1. ವಸಂತ ಋತುವಿನ ಆಗಮನ ಪ್ರಕೃತಿಗೆ ಹೊಸ ಚೈತನ್ಯವನ್ನು ತರುತ್ತದೆ.**
**ಈ ವಾಕ್ಯದಲ್ಲಿರುವ ಅನುಸ್ವಾರ ಸಹಿತ ಪದ**

A. ವಸಂತ
B. ಪ್ರಕೃತಿ
C. ಋತುವಿನ
D. ಚೈತನ್ಯವನ್ನು

ಉತ್ತರ: ☐ ____________________

**2. ಆಕಾಶದಲ್ಲಿ ಬಣ್ಣಬಣ್ಣದ ಗಾಳಿಪಟಗಳು ಹಾರಾಡುತ್ತಿದ್ದವು.**
**ಇಲ್ಲಿ ಆಕಾಶ ಪದದ ತದ್ಭವ ರೂಪ**

A. ಅಗಸ
B. ಆಗಸ
C. ಗಗನ
D. ಆಕಾಸ

ಉತ್ತರ: ☐ ____________________

**3. ನಾಲಗೆ ಅಲಗಿನಂತೆ ಮೊನಚಾದ ಹಲ್ಲುಗಳಿಂದ ತಪ್ಪಿಸಿಕೊಂಡು ತನ್ನನ್ನು ತಾನು ರಕ್ಷಿಸಿಕೊಳ್ಳುತ್ತದೆ.**
**ಇಲ್ಲಿ ಮೊನಚಾದ ಪದವು**

A. ಆಗಮಸಂಧಿ
B. ಆದೇಶಸಂಧಿ
C. ಗುಣಸಂಧಿ
D. ಲೋಪಸಂಧಿ

ಉತ್ತರ: ☐ ____________________

**4. ಕಸಿನ್ಸ್ ಸ್ವಲ್ಪ ಅಸಮಾಧಾನದ ಧ್ವನಿಯಿಂದಲೇ ಮಾತನಾಡಿದರು.**
**ಇಲ್ಲಿ ಅಸಮಾಧಾನದ ಪದದಲ್ಲಿರುವ ವಿಭಕ್ತಿ**

A. ಪ್ರಥಮ
B. ದ್ವಿತೀಯ
C. ಷಷ್ಠಿ
D. ಸಪ್ತಮಿ

ಉತ್ತರ: ☐ ____________________

**5.** **ರಾಧಾ ಒಂಟಿಕಾಲಿನ ಮೇಲೆ ನಿಂತಿದ್ದಳು.**

**ಇಲ್ಲಿ ರಾಧಾ ಎಂಬ ಪದವು**

A. ಅಂಕಿತನಾಮ

B. ರೂಢನಾಮ

C. ಅನ್ವರ್ಥನಾಮ

D. ಸರ್ವನಾಮ

ಉತ್ತರ: ☐ ____________________

**6.** **ಮಗುವಿನ ಭವಿಷ್ಯಕ್ಕೆ ತಾಯಿಯ ಕೊಡುಗೆ ಅಪಾರವಾದದ್ದು.**

**ಇಲ್ಲಿ ಮಗು ಎಂಬ ಪದದ ಬಹುವಚನ ರೂಪ**

A. ಮಗುಗಳು

B. ಮಗಂದಿರು

C. ಮಕ್ಕಳು

D. ಮಕ್ಕಳಂದಿರು

ಉತ್ತರ: ☐ ____________________

**7.** **ಯಾವ ಭಾಷೆಯೂ ತನಗೆ ತಾನೇ ಅಸಮರ್ಥವಲ್ಲ.**

**ಅಸಮರ್ಥ ಎಂಬ ಪದದ ವಿರುದ್ಧಾರ್ಥಕ ಪದ**

A. ಸಮತ

B. ಸಾಮರ್ಥ್ಯ

C. ಸಮನಾರ್ಥ

D. ಸಮರ್ಥ

ಉತ್ತರ: ☐ ____________________

**8.** **ಬೆಟ್ಟಗುಡ್ಡಗಳು ಸೌಂದರ್ಯದ ಪ್ರತೀಕಗಳು.**

**ಇಲ್ಲಿ ಬೆಟ್ಟಗುಡ್ಡ ಎನ್ನುವ ಪದ**

A. ಅನುಕರಣಾವ್ಯಯ

B. ಜೋಡುನುಡಿ

C. ದ್ವಿರುಕ್ತಿ

D. ಭಾವನಾಮ

ಉತ್ತರ: ☐ ____________________

**II. ನೀಡಿರುವ ಗದ್ಯಭಾಗವನ್ನು ಓದಿಕೊಂಡು ಕೆಳಗಿನವುಗಳಲ್ಲಿ ಮೊದಲ ಎರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿ ಪದವನ್ನು ಬರೆಯಿರಿ.** **4 x 1 = 4**

ಸುಮಿತ್ರೆಯ ಸುತ ಲಕ್ಷ್ಮಣನ ಪಕ್ಕದಲ್ಲಿ ನಿಂತಿರುವಾತನೇ ವಾತಸಂಭವ ಹನುಮಂತ, ಬಾಲ್ಯದಲ್ಲಿಯೇ ಝುಗಝುಗಿಸುತ್ತಿರುವ ರವಿಯನ್ನು ಕಂಡು ಹಣ್ಣೆಂದು ಭ್ರಮಿಸಿ ನಭಕ್ಕೆ ಹಾರಿದಾತ, ಈತನ ಹೆಗಲ ಮೇಲೆ ಸಿಡಿಲಿನ ಜ್ವಾಲೆಯಂತೆ ಮೆರೆಯುವವನೇ ವಾಲಿಸುತ ಅಂಗದ.

9. ಸುಮಿತ್ರಿಯ ಸುತ : ಲಕ್ಷ್ಮಣ : : ವಾತಸಂಭವ : ____________

10. ಝುಗಝುಗಿಸುತ್ತಿರುವುದು : ರವಿ : : ಜ್ವಾಲಾಮುಖಿಯಂತೆ ಮೆರೆಯುವವನು : ____________

ವಸಂತ ಬಂದ, ಋತುಗಳ ರಾಜ ತಾ ಬಂದ,
ಚಿಗುರನು ತಂದ, ಹೆಣ್ಗಳ ಕುಣಿಸುತ ನಿಂದ,
ಚಳಿಯನು ಕೊಂದ, ಹಕ್ಕಿಗಳುಲಿಗಳೆ ಚೆಂದ,
ಕುವ್ಹೂ, ಜಗ್, ಜಗ್, ಪುವ್ವಿ, ಟೂವಿಟ್ಟ ವೂ

11. ಕುಣಿಸುತ ನಿಂದ : ಹೆಣ್ಗಳ : : ಋತುಗಳ ರಾಜ : ____________

12. ರಾಜ : ಅರಮನೆ : : ಹಕ್ಕಿ : ____________

**III. ಗದ್ಯ ಮತ್ತು ಪದ್ಯದ ಭಾಗಗಳನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ..** **4 x 1 = 4**

ಚೀನಾ, ಜಪಾನ್, ಮಲೇಶಿಯಾಗಳಿಂದ ಹರಿದು ಬರುವ ಯಥೇಚ್ಛ ಹಣ ಬುದ್ಧನನ್ನು 'ಲಗ್ಜುರಿ' ದೇವರನ್ನಾಗಿಸಲು ಯತ್ನಿಸುತ್ತಿರುವುದು ಎಲ್ಲಕ್ಕಿಂತಲೂ ಮಿಗಿಲಾಗಿ ತಮ್ಮ ಹಣದ ಸಾಮರ್ಥ್ಯವನ್ನು ಮಾರ್ಬಲ್ ಸ್ಟೋನಿನಲ್ಲಿ ಗುಡಿ ಕಟ್ಟಿಸಿ ಪ್ರದರ್ಶಿಸುತ್ತಿರುವುದು ಕಂಡು ಬುದ್ಧ ಕೂಡ ನಕ್ಕಿರಬೇಕು.

13. ಬುದ್ಧನ ಗುಡಿಯನ್ನು ಯಾವ ಸ್ಟೋನಿನಲ್ಲಿ ಕಟ್ಟಿಸಲಾಗಿದೆ?

____________________________________________

____________________________________________

____________________________________________

14. ಬುದ್ಧನನ್ನು ಲಗ್ಜುರಿ ದೇವರನ್ನಾಗಿಸಲು ಯಾವ ದೇಶಗಳಿಂದ ಹಣ ಹರಿದು ಬರುತ್ತಿದೆ?

____________________________________________

____________________________________________

____________________________________________

ಯಾತಕ್ಕೆ ಮಳೆ ಹೋದವೊ ಶಿವಶಿವ
ಲೋಕ ತಲ್ಲಣಿಸುತಾವೊ
ಬೇಕಿಲ್ಲದಿದ್ದರೆ ಬೆಂಕಿಯ ಮಳೆ ಸುರಿದು
ಉರಿಸಿಕೊಳ್ಳಲು ಬಾರದೆ "ಯಾತಕ್ಕೆ"

15. ಲೋಕ ತಲ್ಲಣಿಸಲು ಕಾರಣವೇನು?

16. ಮಳೆ ಬಾರದ ಕಾರಣ ಜನಪದರು ಯಾರಲ್ಲಿ ಮೊರೆಯಿಡುತ್ತಿದ್ದಾರೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **8 x 2 = 16**

ನಾಲಗೆಯು ಹಾಲು–ನೀರು, ಎಣ್ಣೆ–ತುಪ್ಪ, ಕೆನೆ–ಪಾಕ, ಬಿಸಿ–ತಂಪು, ಯಾವುದನ್ನು ಬೇಕಾದರೂ ಸ್ವೀಕರಿಸುತ್ತದೆ. ಆದರೆ ಅದು ಯಾವುದಕ್ಕೂ ಅಂಟಿಕೊಳ್ಳದೇ ಎಲ್ಲವನ್ನೂ ಸ್ವೀಕರಿಸಿಯೂ ತಾನು ನಿರ್ಲೇಪವಾಗಿರುತ್ತದೆ, ಶುಭ್ರವಾಗಿರುತ್ತದೆ. ಬದುಕಿನಲ್ಲಿ ಬಂದ ನೋವು–ನಲಿವು, ಸುಖ–ದುಃಖ ಏರುಪೇರುಗಳನ್ನು ಸ್ವೀಕರಿಸಿ, ಯಾವುದಕ್ಕೂ ಅಂಟಿಕೊಳ್ಳದೇ ಇರಲೇಬೇಕೆಂಬುದನ್ನು ನಾಲಗೆ ಇಂಗಿತಗೊಳಿಸುತ್ತದೆ.

17. ನಾಲಗೆಯಿಂದ ಕಲಿಯಬೇಕಾದ ಗುಣಗಳಾವುವು?

18.



ಈ ಚಿತ್ರದಲ್ಲಿರುವ ಅಂಗಗಳನ್ನು ಹೆಸರಿಸಿ. ಅವುಗಳ ಕೆಲಸಗಳನ್ನು ಪಟ್ಟಿ ಮಾಡಿ.

ನರಸಮ್ಮನವರು ತಿಮ್ಮಕ್ಕನಿಗಿಂತಲೂ ಹಿರಿಯರು ಹಾಗೂ ಹಿಂದುಳಿದ ಪ್ರದೇಶವಾದ ಪಾವಗಡವರು. ಈ ಇಬ್ಬರೂ ಬಸ್ ಪ್ರಯಾಣವನ್ನೇ ಸರಿಯಾಗಿ ಮಾಡದವರಲ್ಲಿ, ನರಸಮ್ಮಜ್ಜಿಗೆ ಈ ಬಾರಿ ರಾಷ್ಟ್ರೀಯ ವಯೋಶ್ರೇಷ್ಠ ಸಮ್ಮಾನ್ ಪ್ರಶಸ್ತಿ ಬಂದಾಗ ಅದನ್ನು ಸ್ವೀಕರಿಸಲು ದೆಹಲಿಗೆ ಹೋಗಬೇಕಾಯಿತು. ಆಗ ಅವರು ವಿಮಾನದಲ್ಲಿ ಪಯಣಿಸಿದ ಅನುಭವವು ಸ್ವಾರಸ್ಯಕರವಾಗಿದೆ.

19. ನರಸಮ್ಮಜ್ಜಿ ವಿಮಾನವೇರಲು ಕಾರಣವಾದ ಸಂದರ್ಭವನ್ನು ತಿಳಿಸಿ.



20. ಈ ಚಿತ್ರವನ್ನು ಗಮನಿಸಿ, ನರಸಮ್ಮಜ್ಜಿಗೆ ಗಗನಸಖಿಯರ ಬಗ್ಗೆ ಇದ್ದ ಅಭಿಪ್ರಾಯವನ್ನು ತಿಳಿಸಿ.

ಪ್ರೀತಿಯ ಗುಣಿ ತೆಗೆದು
ಪ್ರೇಮದ ಪಾತಿಯ ಮಾಡಿ
ನೀತಿಯ ಬೀಜವ ಬಿತ್ತಿ
ವಾತ್ಸಲ್ಯದ ಫಲವ ಪಡೆವ
ದಿನಗಳೆಂದು ಬರುವವೊ

ಹರಿವ ನೀರು ಇರುವ ನೆಲ

ಸುಳಿವ ಗಾಳಿ ಉಣ್ಣುವನ್ನು

ತೊಡುವ ಬಟ್ಟೆ ಸುಡುವ ಬೆಂಕಿ

ಎಲ್ಲರಿಗೂ ಒಂದೇ ಎಂಬ

ದಿನಗಳೆಂದು ಬರುವವೊ

21. ಸೃಷ್ಟಿಯಲ್ಲಿ ಎಲ್ಲರಿಗೂ ಸಮಾನವಾಗಿರುವ ಅಂಶಗಳಾವುವು?

22. ವಾತ್ಸಲ್ಯದ ಫಲವನ್ನು ಹೇಗೆ ಪಡೆಯಬೇಕು ತಿಳಿಸಿ.

23. ಈ ಪದ್ಯದಲ್ಲಿ ಅಡಕವಾಗಿರುವ ಮೌಲ್ಯಗಳನ್ನು ಪಟ್ಟಿ ಮಾಡಿ.

ದಟ್ಟವಾದ ಕಾಡೊಂದರಲ್ಲಿ ಸಿಂಹವೊಂದು ವಾಸವಾಗಿತ್ತು. ಪ್ರತಿನಿತ್ಯ ಅದು ತನ್ನ ಆಹಾರಕ್ಕಾಗಿ ಎಷ್ಟೋ ಪ್ರಾಣಿಗಳನ್ನು ಕೊಂದು ಹಾಕುತ್ತಿತ್ತು. ಇದರಿಂದ ಬೇಸತ್ತ ಕಾಡಿನ ಪ್ರಾಣಿಗಳು ಸಭೆ ಸೇರಿ, ತಾವೇ ಪ್ರತಿನಿತ್ಯ ಸರದಿಯಂತೆ ಒಂದೊಂದು ಪ್ರಾಣಿಯನ್ನು ಸಿಂಹದ ಬಳಿಗೆ ಕಳುಹಿಸಬೇಕು ಎಂದು ತೀರ್ಮಾನಿಸಿದವು. ಸಿಂಹವೂ ಈ ತೀರ್ಮಾನಕ್ಕೆ ಒಪ್ಪಿ, ಪ್ರತಿದಿನ ತನ್ನ ಗುಹೆಗೆ ಬಂದ ಪ್ರಾಣಿಯನ್ನು ತಿಂದು ನೆಮ್ಮದಿಯಾಗಿತ್ತು.

24. ಕಾಡಿನ ಪ್ರಾಣಿಗಳ ಬೇಸರಕ್ಕೆ ಕಾರಣವೇನು?

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ** **2 x 3 = 6**

25. ಪೆಸಿಫಿಕ್ ಸಾಗರವೇ ಆ ಪಾತ್ರೆಯ ಅರ್ಧಭಾಗ ತುಂಬುತ್ತದೆ.


26. "ರನ್ನದ ಕನ್ನಡಿ ಬದುಕಿಗೆ ಹಿಡಿದಿಹನು"

**VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **4 x 3 = 12**

(ನೀಡಿರುವ ಗದ್ಯ ಓದಿಕೊಂಡು ಪ್ರಶ್ನೆ ಸಂಖ್ಯೆ 27ನ್ನು ಉತ್ತರಿಸಿ)

ನಮ್ಮಲ್ಲಿ ಗುಡಿಗೆ ಹೋದೊಡನೆಯೇ ತಲೆಯ ಮೇಲಿನ ತೊಡುಗೆಯನ್ನು ತೆಗೆಯುವ ಪದ್ಧತಿ ಕೆಲವರಲ್ಲುಂಟು. ಅಮೆರಿಕನ್ನರು ಚರ್ಚಿಗೆ ಹೋದಾಗ ಗಂಡಸರು ಮಾತ್ರ ಟೋಪಿಯನ್ನು ತೆಗೆಯುತ್ತಾರೆ. ಆದರೆ ಹೆಂಗಸರು ಹ್ಯಾಟು ಧರಿಸದೇ ಚರ್ಚಿಗೆ ಹೋಗಿ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಅವಮರ್ಯಾದೆ. ನಮ್ಮಲ್ಲಿ ಹಿರಿಯರನ್ನು ಕಾಣಲು ಹೋದಾಗ ಬೀದಿಯಲ್ಲೆಲ್ಲ ಬರಿತಲೆಯಲ್ಲಿ ಓಡಾಡಿದರೂ ಅವರೆದುರಿಗೆ ಹೋಗುವ ಮುನ್ನ ಕಿಸೆಯಲ್ಲಿ ಸೇರಿಕೊಂಡಿರುವ ಟೋಪಿಯನ್ನು ಧರಿಸಿಕೊಂಡು ನಮ್ರತೆಯಿಂದ ನಮಸ್ಕರಿಬೇಕು. ಇದು ನಮ್ಮ ಸಂಪ್ರದಾಯಕ್ಕನುಗುಣವಾದ ಮರ್ಯಾದೆ. ಅವರಲ್ಲಿ ಧರಿಸಿಕೊಂಡಿದ್ದ ಹ್ಯಾಟನ್ನು ದೊಡ್ಡವರ ಸನ್ನಿಧಾನದಲ್ಲಿ ತಲೆಯ ಮೇಲಿಂದ ತೆಗೆದು ಬಗ್ಗಿ ವಂದಿಸಬೇಕು. ಇದು ಅವರ ಸಂಪ್ರದಾಯಕ್ಕನುಗುಣವಾದ ಮರ್ಯಾದೆ.


27. ತಲೆಯುಡುಗೆಗೆ ಸಂಬಂಧಿಸಿದಂತೆ ನಮ್ಮ ಸಂಸ್ಕೃತಿಗೂ ಅಮೆರಿಕಾದ ಸಂಸ್ಕೃತಿಗೂ ಇರುವ ವ್ಯತ್ಯಾಸವನ್ನು ವಿವರಿಸಿ.



28. ಈ ಚಿತ್ರವನ್ನು ಗಮನಿಸಿ, ಟೋಪಿಗಳನ್ನು ಧರಿಸುವ ವಿವಿಧ ಸಂದರ್ಭಗಳನ್ನು ವಿವರಿಸಿ.

ಅಪ್ಪ ಅಮ್ಮ ಅನ್ನು
ಕನ್ನಡ ಉಳಿಯುವುದು
ಕಳ್ಳು ಬಳ್ಳಿ ತಾನೆ ನಂಟನು ಬೆಸೆಯುವುದು
ಅಕ್ಕಿ ರಾಗಿ ಅನ್ನು
ಕನ್ನಡ ಉಳಿಯುವುದು
ಕಾಳು ಕಡ್ಡಿ ತಾನೆ ಹಸಿವನು ನೀಗುವುದು

29. ಕನ್ನಡ ಉಳಿಸಲು ಕವಿ ನೀಡುವ ಸಂದೇಶವನ್ನು ತಿಳಿಸಿ.



30. ಈ ಚಿತ್ರವನ್ನು ಗಮನಿಸಿದಾಗ ತಾಯಿಯೊಬ್ಬಳ ಬಡತನವನ್ನು ಯಾವುದು ಮರೆಸುತ್ತದೆ ಎಂದು ಜನಪದರು ವರ್ಣಿಸಿದ್ದಾರೆ?

**VII.** **5 x 2 = 10**

31. 

ಈ ರಾಷ್ಟ್ರಕವಿಯನ್ನು ಗುರುತಿಸಿ, ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿಗಳ ಕುರಿತು ಬರೆಯಿರಿ.

32. 

ಈ ಚಿತ್ರದಲ್ಲಿರುವ ಸಾಹಿತಿಯನ್ನು ಗುರುತಿಸಿ, ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿಗಳ ಕುರಿತು ಬರೆಯಿರಿ..


**VIII. ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. 1 x 3 = 3**

33. ದೇಶ ಸುತ್ತು ಕೋಶ ಓದು

ಅಥವಾ

ಹಾಸಿಗೆ ಇದ್ದಷ್ಟು ಕಾಲು ಚಾಚು

**IX. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.. 1 x 4 = 4**



34. ಈ ಚಿತ್ರವನ್ನು ಗಮನಿಸಿ, ಯಕ್ಷ ಮತ್ತು ಧರ್ಮರಾಯನೊಡನೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಅಥವಾ

ಧರ್ಮರಾಯನು ತನ್ನ ಸಹೋದರರಿಗೆ ಆಪತ್ತಿನಿಂದ ಪಾರುಮಾಡಲು ಮಾಡಿದ ಉಪಾಯವನ್ನು ನಿಮ್ಮ ಮಾತುಗಳಲ್ಲಿ ತಿಳಿಸಿ.

_______________________________________________ ದಾಸತ್ವವೇ ಲೇಸು ॥

**X.** ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. **1 x 4 = 4**

ಒಡನೆ ______________________

______________________________

______________________________

______________________________ ವಾಸವೇ ಲೇಸು ॥

ಅಥವಾ

ಮನೆಯುತಿಹ ______________________

______________________________

______________________________

______________________________ ದಾಸತ್ವವೇ ಲೇಸು ॥

**XI. ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **4 x 1 = 4**

36. ಗೆಳೆಯರು ಯಾರೆಂದು ತಿಳಿದರೆ ವ್ಯಕ್ತಿಯು ಎಂಥವರೆಂದು ತಿಳಿಯಬಹುದು ಎಂಬುದು ಹಿರಿಯರ ನುಡಿ. ಗೆಳೆತನದಲ್ಲಿ ಜಾತಿ–ಭೇದಗಳಿಲ್ಲ, ಮೇಲು–ಕೀಳುಗಳಿಲ್ಲ. ಅಲ್ಲಿ ಎಲ್ಲವೂ ಸಮಾನ. ಆ ಮಧುರ ಸಂಬಂಧವು ಸೀಮಾತೀತವಾದುದು. ಬದುಕಿನಲ್ಲಿ ಉತ್ತಮ ಗೆಳೆಯನ ಸಂಪಾದನೆಯು ಒಂದು ಸುಕೃತ ಫಲ. ಅಂತಹ ಗೆಳೆತನವು ನಮ್ಮನ್ನು ನೋವು–ಸಂಕಟಗಳಿಂದ ದೂರವಿಡುತ್ತದೆ, ಒಳ್ಳೆಯ ಕೆಲಸಕ್ಕೆ ಸದಾ ಪ್ರೇರಣೆ ನೀಡುತ್ತದೆ. ಗೆಳೆತನದಲ್ಲಿ ಹೇಳಿದ ಗುಟ್ಟು ಎಂದಿಗೂ ಗುಟ್ಟಾಗಿಯೇ ಇರುತ್ತದೆ. ಸನ್ಮಿತ್ರನು ಆಪತ್ತಿನಲ್ಲಿ ಸಹಾಯ ಮಾಡುತ್ತಾನೆ. ಅವಶ್ಯಕತೆ ಇದ್ದಾಗ ವಸ್ತು, ಹಣ ಮುಂತಾದವುಗಳನ್ನು ಒದಗಿಸುತ್ತಾನೆ. ಇಂತಹ ಗೆಳೆತನದಲ್ಲಿ ಪರಸ್ಪರ ಕೊಡುಕೊಳ್ಳುವಿಕೆ ಅತ್ಯಗತ್ಯವಾಗಿರುತ್ತದೆ.

ಎ) ಹಿರಿಯರ ನುಡಿ ಯಾವುದು?

______________________________

______________________________

ಬಿ) ಎಲ್ಲಿ ಎಲ್ಲವೂ ಸಮಾನ?

______________________________

______________________________

ಸಿ) ಬದುಕಿನಲ್ಲಿ ಸುಕೃತ ಫಲ ಯಾವುದು?

______________________________

______________________________

ಡಿ) ಗೆಳೆತನವು ಯಾವುದರಿಂದ ನಮ್ಮನ್ನು ದೂರವಿಡುತ್ತದೆ?

______________________________

______________________________

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.** **1 x 4 = 4**

37. ಕಂಪ್ಯೂಟರ್ ಶಿಕ್ಷಣದ ಮಹತ್ವ

ಅಥವಾ

ರಾಷ್ಟ್ರೀಯ ಹಬ್ಬಗಳ ಮಹತ್ವ

______________________________

______________________________

______________________________

______________________________

______________________________

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1 x 5 = 5**

ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ವಿವೇಕ್ ಎಂದು ಭಾವಿಸಿಕೊಂಡು ಮೂಡಿಗೆರೆಯ ನಿವಾಸಿಯಾಗಿರುವ ನಿಮ್ಮ ತಾಯಿ ಕಮಲಮ್ಮ ಎಂಬುವರಿಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯ ಕುರಿತು ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಬಳ್ಳಾರಿಯ ಹೊಸಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಸಂದೀಪ್ ಎಂದು ಭಾವಿಸಿಕೊಂಡು ನಿಮ್ಮ ಗ್ರಾಮಕ್ಕೆ ಬೀದಿ ದೀಪ ಹಾಕಿಸಿಕೊಡುವಂತೆ ಕೋರಿ, ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಮನವಿ ಪತ್ರವನ್ನು ಬರೆಯಿರಿ.